**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ:: 114/2017**

**ಸಾಕ್ಷಿದಾರರ ಹೆಸರು** : ಸಿ.ಆರ್. ಮೋಹನ್ ಕುಮಾರ್ **PW-01**

**ತಂದೆಯ ಹೆಸರು** : ಸಿ.ಸಿ ರಾಜಣ್ಣ

**ವಯಸ್ಸು** : 52 ವರ್ಷ

**ಉದ್ಯೋಗ** : ಸಹಾಯಕ ಉಪ ನಿರೀಕ್ಷಕರು, ಶೃಂಗೇರಿ ಪೋಲೀಸ್ ಠಾಣೆ.

**ವಾಸಸ್ಥಳ** : ಶೃಂಗೇರಿ.

**ದಿನಾಂಕಃ 05-07-25 ರಂದು ಪ್ರಮಾಣವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿ ಸಾಕ್ಷಿಯ ವಿಚಾರಣೆ )**

**:: ಮುಖ್ಯ ವಿಚಾರಣೆ :: ಮಾನ್ಯ ಎಪಿಪಿಯವರಿಂದ ::**

ನಾನು ಕಳೆದ 11 ತಿಂಗಳಿನಿಂದ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 28-10-2024 ರಂದು ಈ ಪ್ರಕರಣದ ಆರೋಪಿಯಾದ Suryanarayana Shasthri, ವಾಸ- ನಂ. 488 ಈಶವಸ್ಯಾಮ್, 01 ನೇ ಮಹಡಿ, 01 ನೇ ಕ್ರಾಸ್, 01 ನೇ ಬ್ಲಾಕ್, 03 ನೇ ಮುಖ್ಯ ರಸ್ತೆ, ಮಾರುತಿ ಲೇ ಔಟ್, ವಸಂತಪುರ, ಬೆಂಗಳೂರು - 560 061 ರವರ ಉದ್ಘೋಷಣಾ ಜಾರಿಯನ್ನು ಮಾಡಲು ನನ್ನನ್ನು ನಮ್ಮ ಠಾಣಾ ಪಿ.ಎಸ್.ಐ ನೇಮಕ ಮಾಡಿದ್ದು, ಈ ಸಂಬಂಧ ನಾನು ಸದರಿ ಆರೋಪಿತರ ವಿಳಾಸಕ್ಕೆ ಹೋಗಿದ್ದು, ಈ ಹಿಂದೆ ಅವರು ವಾಸ ಇದ್ದ ಮನೆಯ ಸಮೀಪ ವಾಸವಿರುವ ಸ್ಥಳೀಯರನ್ನು ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ಕೃಷ್ಣರಾವ್ ಬಿನ್ ಸುಬ್ರಮಣ್ಯ ರಾವ್, 63 ವರ್ಷ, ವಾಸ – 01 ನೇ ಮುಖ್ಯ ರಸ್ತೆ, ಮಾರುತಿ ಲೇ ಔಟ್, ವಸಂತ ಪುರ, ಬೆಂಗಳೂರು ಮತ್ತು ಹರೀಶ್ ಬಿನ್ ಭವನಿಶಂಕರ, 37 ವರ್ಷ, ವಾಸ – 01 ನೇ ಮುಖ್ಯ ರಸ್ತೆ, ಮಾರುತಿ ಲೇ ಔಟ್, ವಸಂತ ಪುರ, ಬೆಂಗಳೂರು ರವರುಗಳನ್ನು ಕೋರಿರುತ್ತೇನೆ. ಅವರುಗಳಿಗೆ ಸದರಿ ಪ್ರಕರಣದ ಬಗ್ಗೆ ತಿಳಿಸಿ ಮಹಜರ್ ಕಾಲಕ್ಕೆ ಸಾಕ್ಷಿದಾರರಾಗಿ ಸಹಕರಿಸುವಂತೆ ತಿಳಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ತಲೆಮರೆಸಿಕೊಂಡ Suryanaraya Shasthri ರವರು ಈವರೆಗೂ

ಪೊಲೀಸರಿಗೆ ಸಿಕ್ಕಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ ಕಾರಣ ಅವರು ಊರಿಗೆ ಬಂದರೆ ಪೊಲೀಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ಹಾಜರಾಗುವಂತೆ ತಿಳಿಸಿ, ನಮ್ಮ ಮೈಕ್ ನಿಂದ ಪ್ರಚಾರ ಮಾಡಿ ಸುತ್ತೋಲೆ ಹೊರಡಿಸಿರುತ್ತೇವೆ. ಪ್ರೊಕ್ಲಮೇಶನ್ ನ ಪ್ರತಿಯನ್ನು ಆರೋಪಿ ವಾಸವಿದ್ದ ಮನೆಯ ಎದುರುಗಡೆ ಗೋಡೆಗೆ ಪಂಚರಾದ ಕೃಷ್ಣರಾವ್ ಮತ್ತು ಹರೀಶ್ ರವರ ಸಮಕ್ಷಮ ಅಂಟಿಸಿರುತ್ತೇನೆ, ಇನ್ನೊಂದು ಪ್ರತಿಯನ್ನು ಬಿ.ಬಿ.ಎಂ.ಪಿ. ಯ ಸಾರ್ವಜನಿಕ ಪ್ರಕಟಣೆ ಜಾಗದಲ್ಲಿ ಅಂಟಿಸಿರುತ್ತೇನೆ. ಮತ್ತೊಂದು ಪ್ರತಿಯನ್ನು ಆರೋಪಿಯ ಮನೆಯ ಬಳಿ ಇರುವ ಸರ್ಕಾರಿ ಶಾಲೆಯ ಬಳಿ ಅಂಟಿಸಿರುತ್ತೇನೆ. ಸದರಿ ಸಮಯದಲ್ಲಿ ಒಂದು ಪೋಟೋ ತೆಗೆದಿರುತ್ತೇನೆ. ಸದರಿ ಮಹಜರ್ ಅನ್ನು ಅದೇ ದಿನ ಸ್ಥಳದಲ್ಲಿಯೇ ಬೆಳಗ್ಗೆ 11.00 ಗಂಟೆಯಿಂದ 12.00 ವರೆಗೆ ದಾಖಲು ಮಾಡಿರುತ್ತೇನೆ. ಸಾಕ್ಷಿಯು ಪ್ರೊಕ್ಲಮೇಶನ್ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಉದ್ಘೋಷಣಾ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -2 ಎಂದು ಗುರುತಿಸಲಾಯಿತು. 1 ಪೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದಿಃ19-12-2024 ರಂದು ಸಹಾಯಕ ಕಂದಾಯ ಅಧಿಕಾರಿ ಬೆಂಗಳೂರು ಮಹಾನಗರ ಪಾಲಿಕೆಯವರು ನೀಡಿದ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

**:: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.